

ಎಲ್ಲರೊಡನೆ ಊಟಕ್ಕೆ ಹೋದರೂ ಯಾರ ಹತ್ತಿರವೂ ಅಷ್ಟು ಮಾತನಾಡಲಿಲ್ಲ. ಮೂರು ಸಾಲುಗಳ ನಂತರ ಕೂತಿದ್ದ ಸೀಯೊನ್ ಮಾತ್ರ ಬಹಳ ಖುಷಿಯಲ್ಲಿದ್ದದ್ದು ಕಂಡುಬಂತು. ಪಕ್ಕದಲ್ಲಿದ್ದವರು ತಮ್ಮ ಬಟ್ಟಲಿನಲ್ಲಿದ್ದ ಸಲಾಡು ಒದ್ದೆ ಬ್ರೆಡ್ಡನ್ನು ಅವಳ ಬಟ್ಟಲಿಗೆ ಹಾಕುತ್ತಿದ್ದರು. ಅರೆ, ಎಲ್ಲರಿಗೂ ಅವಳು ಬಸುರಿ ಎಂದು ಗೊತ್ತಾದ ಹಾಗಿದೆಯಲ್ಲ. ಅವಳೇ ಖುಷಿಯಲ್ಲಿದ್ದಾಗ ನಮ್ಮದೇನು... ಇನ್ನೆಂಟು ತಿಂಗಳಲ್ಲಿ ಬರುವ ಮಗುವಿನ ಬರುವಿಕೆಯನ್ನು ಆ ಸಾಲಿನಲ್ಲಿ ಕುಂತವರೆಲ್ಲ ಇಂದೇ ಸಂಭ್ರಮಿಸುತ್ತಿದ್ದಾರಲ್ಲ ಎಂದುಕೊಂಡ ಗುರುಪಾದ.

ಊಟ ಮುಗಿಸಿ ಬಂದಿದ್ದೇ ಅವಳ ಮುಂದಿನ ಕೆಲವು ತಿಂಗಳ ಕೆಲಸದ ಹಂಚಿಕೆ, ಪ್ರೊಜೆಕ್ಟ್ ಡೆಲಿವರಿ ದಿನಾಂಕ ಇತ್ಯಾದಿಗಳನ್ನೆಲ್ಲ ಗಮನಿಸಿ ಅವಳಿಗೆ ಮುಂದಿನ ದಿನಗಳಲ್ಲಿ ಹೊರೆಯಾಗುವ ಕೆಲವು ಕೆಲಸಗಳನ್ನು ಅವಳೇ ತಯಾರು ಮಾಡಿದ ಕೆಲವು ಹೊಸ ಸದಸ್ಯರಿಗೆ ಕೊಡುವ ಯೋಚನೆ ನಡೆಯುತ್ತಿದ್ದಂತೆ ಸೀಯೊನ್ ಗುರುಪಾದನ ಮುಂದೆ ಹಾಜರಾಗಿ, 'ನಿನ್ನೆಯೇ ತೋರಿಸಬೇಕಾಗಿದ್ದ ಕೆಲವು ಫೈಲ್‌ಗಳನ್ನು ನಿಮ್ಮ ಕಂಪ್ಯೂಟರ್‌ಗೆ ಕಳುಹಿಸಿದ್ದೇನೆ. ನಿಮ್ಮ ಏನಾದರೂ ಸಲಹೆಗಳಿದ್ದರೆ ಅದನ್ನು ಮುಂದಿನ ಡೆಲಿವರಿಯಲ್ಲಿ ನೋಡಿಕೊಳ್ಳೋಣ. ಈಗಂತೂ ಒಂದಿಷ್ಟೂ ಸಮಯವಿಲ್ಲ. ಪ್ರೊಜೆಕ್ಟ್ ಮ್ಯಾನೇಜರಂತೂ ನಿನ್ನೆಯಿಂದಲೇ ಬೆನ್ನ ಹಿಂದೆ ಬಿದ್ದಿದ್ದಾರೆ' ಎಂದಳು. ಅದಕ್ಕೆ ಗುರುಪಾದ 'ನೀನು ಅದರ ಕಾಳಜಿ ಬಿಡು, ಹಾಗೇನಾದರೂ ಇದ್ದರೆ ನನ್ನ ಹತ್ತಿರ ಕಳುಹಿಸು' ಎಂದ. ಪಕ್ಕಕ್ಕಿದ್ದ ಸೀಯೊನ್ ಅವಳ ಭಾಷೆಯಲ್ಲಿ ಇದು ಇದು ಇದು ಎಂದು ತಡವರಿಸುತ್ತಾ 'ನನಗೆ ಯಾವ ಯಾವ ಕೆಲಸ ಈಗ ಹಂಚಿಕೆಯಾಗಿದೆಯೋ ಅವನ್ನೆಲ್ಲಾ ಸಡಿಲಿಸುವುದಾಗಲೀ ಅಥವಾ ಬೇರೆಯವರಿಗೆ ಹಂಚುವುದಾಗಲೀ ಬೇಡ. ನಾನು ಸಮರ್ಥವಾಗೇ ನಡೆಸುತ್ತೇನೆ; ನಿಮ್ಮ ಗುಡ್ ವಿಶಸ್ ಬೇಕು' ಎಂದಳು. ಗುರುಪಾದನ ನಿರೀಕ್ಷೆಮೀರಿ ಅವಳ ಮಾತು ಈತನ ತಲೆಗೆ ನೇರವಾಗಿ ಹೊಡೆದಿತ್ತು. 'ನನ್ನ ಕೆಲಸ ಮತ್ತು ನನ್ನ ಬಸಿರು ಎರಡರನ್ನೂ ಸರಿಯಗಿ ಸಮರ್ಥವಾಗೇ ನಿಭಾಯಿಸಬಲ್ಲೆ. ಅದಕ್ಕೆ ನಿಮ್ಮ ಅನುಕಂಪದ ಅವಶ್ಯಕತೆ ಇಲ್ಲ; ತಾದಾತ್ಮ್ಯಾನುಭುತಿಯ ಆವಶ್ಯಕತೆ ಇದೆ ಎಂಬ ಅರ್ಥ ಬರುವಂತೆ ಆ ನಾಲ್ಕು ವಿನಮ್ರ ಶಬ್ದಗಳಲ್ಲಿ ನನಗೆ ಬಾರಿಸಿಬಿಟ್ಟಳಲ್ಲಾ. ಅಲ್ಲಾ... ಅಲ್ಲಾ... ನಾನು ಅವಳ ಕೆಲಸದ ಹಂಚಿಕೆಯ ಅಥವಾ ಅವಳ ಹೊರೆ ಕಡಿಮೆ ಮಾಡುವ ಬಗ್ಗೆ ವಿಚಾರ ಮಾಡಿದ್ದನೇ ಹೊರತು, ಯಾರಿಗೂ ಹೇಳಿರಲಿಲ್ಲವಲ್ಲಾ. ಇವಳ್ಯಾಕೆ ಹೀಗೆ ಮಾತನಾಡುತ್ತಿದ್ದಾಳೆ' ಎಂದುಕೊಂಡ. ಸೀಯೊನ್ ಕಡೆಗೆ ತಿರುಗಿ, 'ನನಗೆ ಸಂಪೂರ್ಣ ಅರ್ಥವಾಗುತ್ತದೆ. ನೀ ಎಂದೂ ಸಮರ್ಥವಾಗೇ ಇದ್ದೀಯಾ. ಯಾವುದಕ್ಕೂ ಇನ್ನು ನಾಲ್ಕೇ ದಿವಸಕ್ಕೆ ಬರುವ ಅಂದರೆ, ಬರುವ ಸೋಮವಾರದ ಪ್ರೊಜೆಕ್ಟ್ ಡೆಲಿವರಿ ತುಂಬಾ ಮುಖ್ಯ. ಅದೇ ನಮ್ಮ ಪ್ರಾಡಕ್ಟಿನ ಗುಣಮಟ್ಟವನ್ನು ನಿರ್ಧರಿಸುವುದು. ಅದಕ್ಕೇನಾದರು ಸಹಾಯ ಬೇಕಿದ್ದರೆ ಕೇಳು. ಒಮ್ಮೆ ಡೆಲಿವರಿ ಕಷ್ಟವಾದರೆ ಈ ವೀಕೆಂಡ್...